ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಗಾಂಧೀಜಿ: ಜಾತಿ, ವರ್ಣ, ಹಿಂದುತ್ವ ಕುರಿತು ಅಭಿಪ್ರಾಯ-ಭಿನ್ನಾಭಿಪ್ರಾಯಗಳು

ಪ್ರಕಾಶ ಬಿ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಸಿ.

DOI: https://doi.org/10.5281/zenodo.15504412

ABSTRACT:

ವರ್ತಮಾನದಲ್ಲಿ ಗಾಂಧೀಜಿ ಮತ್ತು ಡಾ. ಬಿ. ಆರ್, ಅಂಬೇಡ್ಕರ್‌ರವರನ್ನು ಅನುಸಂಧಾನ ಮಾಡಿದಾಗ ಇವರಿಬ್ಬರ ನಡುವಿನ ಜಾತಿ, ವರ್ಣ, ಹಿಂದುತ್ವ ಕುರಿತು ಅನೇಕ ಹುಸಿ ಚರ್ಚೆಗಳು, ಪ್ರಚಾರ, ಸೆಮಿನಾರ್‌ಗಳು, ಪತ್ರಿಕೆಗಳ ಮೂಲಕ ಬಿತ್ತರವಾಗುತ್ತಿವೆ. ದೇಶದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಈ ಅಭಿಪ್ರಾಯ-ಭಿನ್ನಾಭಿಪ್ರಾಯಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿವೆ. ಈ ಲೇಖನದ ಮೂಲಕ ನಿಜವನ್ನು ಅರಿಯುವ ಮುಖೇನ ಹೊಸದೊಂದು ತಾತ್ವಿಕತೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಜಾತ್‌ಪತ್ ತೊಡಕ್ ಮಂಡಲಕ್ಕಾಗಿ ಅಂಬೇಡ್ಕರ್ ಸಿದ್ಧಪಡಿಸಿದ ಜಾತಿ ವಿಷಯ ಉಪನ್ಯಾಸವನ್ನು ಗಮನಿಸಿ ತಮ್ಮ ಹರಿಜನ ಪತ್ರಿಕೆಯಲ್ಲಿ ಗಾಂಧೀಜಿ ಅದನ್ನು ಉಲ್ಲೇಖಿಸುವ ಮೂಲಕ ಅಂಬೇಡ್ಕರ್ ರವರನ್ನು ಇದು ಪ್ರಚಾರಕ್ಕಾಗಿ ಮಾಡುತ್ತಿರುವ ಉಪನ್ಯಾಸ ಎಂದು ತಿಳಿಸುತ್ತಾರೆ. ಅಂಬೇಡ್ಕರ್ ತಮ್ಮ ಉಪನ್ಯಾಸದಲ್ಲಿ ಮಂಡಿಸಿದ್ದ ಮುಖ್ಯ ಅಂಶಗಳು: ಜಾತಿಪದ್ಧತಿ ಹಿಂದೂಗಳನ್ನು ಹಾಳುಗೆಡಹಿದೆ. ಚಾತುರ್ವರ್ಣ್ಯದ ಮೇಲೆ ಹಿಂದೂ ಸಮಾಜವನ್ನು ಪುನರ್ ಸಂಘಟಿಸುವುದು ಅಸಾಧ್ಯ, ಏಕೆಂದರೆ ವರ್ಣವ್ಯವಸ್ಥೆಯೊಂದು ಸೋರುವ ಪಾತ್ರೆಯಿದ್ದಂತೆ. ಉಳಿದುಕೊಳ್ಳುವಂಥ ಅಂತಸ್ಥ ಬಲ ಅದಕ್ಕಿಲ್ಲ. ಯಾರಾದರೂ ವರ್ಣವನ್ನು ಅತಿಕ್ರಮಿಸಿದರೆ ಅವರನ್ನು ಶಿಕ್ಷೆಗೆ ಗುರಿ ಮಾಡುವಂತಹ ಶಾಸನಾಧಿಕಾರ ಅದಕ್ಕೆ ಅವಶ್ಯ. ಆ ಅಧಿಕಾರವಿಲ್ಲದೆ ಹೋದರೆ ವರ್ಣವ್ಯವಸ್ಥೆಯು ಜಾತಿ ವ್ಯವಸ್ಥೆಯ ಅವಸ್ಥೆಗೆ ಇಳಿಯುವ ಸಂಭವವಿದೆ. ಚಾತುರ್ವರ್ಣ್ಯದ ಮೇರೆಗೆ ಹಿಂದೂ ಸಮಾಜವನ್ನು ಪುನರ್ ಸಂಘಟಿಸುವುದು ಅಪಾಯಕಾರಿಯಾಗುತ್ತದೆ. ಏಕೆಂದರೆ ವರ್ಣವ್ಯವಸ್ಥೆ ಸಾಮಾನ್ಯ ಜನರ ಸಮೂಹಕ್ಕೆ ಜ್ಞಾನಸಂಪಾದನೆ ಹಾಗೂ ಶಸ್ತ್ರಾಭ್ಯಾಸದ ಅವಕಾಶವನ್ನು ನಿರಾಕರಿಸುವುದರಿಂದ ಜನಸಾಮಾನ್ಯರ ಅವನತಿಗೆ ಕಾರಣವಾಗುತ್ತದೆ. ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ತತ್ವಗಳನ್ನೊಳಗೊಂಡ ಧರ್ಮವನ್ನು ಆಧರಿಸಿಯೇ ಹಿಂದೂ ಸಮಾಜದ ಪುನರ್ ನಿರ್ಮಾಣವಾಗತಕ್ಕದ್ದು. ಈ ಗುರಿಯನ್ನು ಸಾಧಿಸಬೇಕಾದರೆ ಜಾತಿ ಮತ್ತು ವರ್ಣಗಳ ಬಗೆಗಿರುವ ಗೌರವ ಭಾವನೆ ನಷ್ಟವಾಗತಕ್ಕದು. ಶಾಸ್ತ್ರಗಳು, ದೇವವಾಣಿಯೆಂಬ ಭಾವನೆಯನ್ನು ನಾಶಗೊಳಿಸುವುದರಿಂದ ಮಾತ್ರ ಜಾತಿ ವರ್ಣಗಳ ಮೇಲಿನ ಗೌರವ ನಾಶವಾಗಬಲ್ಲದು. ತಿಲಕರ ಲೇಖನಗಳಿಂದ ಉದಾಹರಣೆಗಳನ್ನು ಆಯ್ದುಕೊಂಡ ಅಂಬೇಡ್ಕರ್ ಶಾಸ್ತ್ರಗಳು ಹೇಳಲಾಗುವ ಆದರ್ಶ ವಿಚಾರಗಳು ಸಾಧುಸಂತರು

ಹೊಸದಾಗಿ ಸೇರಿಸಲಾದ ಪ್ರಕ್ಷಿಪ್ತವೇ ಹೊರತು ಅವು ಅಧಿಕೃತವಲ್ಲದ್ದು ಎಂದು ತಿಳಿಸುತ್ತಾರೆ. ಅವುಗಳಲ್ಲಿ ಇರುವುದೇನೆಂದು ತಿಳಿಯಲಾರದಷ್ಟು ಜನ ನಿರಕ್ಷರಿಗಳಾಗಿದ್ದಾರೆ. ಹೇಳಿದ್ದನ್ನೆಲ್ಲ ಕೇಳಿ ನಂಬಿದವರು ಅವರು, ಜಾತಿಪದ್ಧತಿಯನ್ನೂ, ಅಸ್ಪೃಶ್ಯತೆಯನ್ನೂ ಶಾಸ್ತ್ರಗಳು ವಿಧಿಸಿವೆಯೆಂದು ಅವರಿಗೆ ಹೇಳುತ್ತಾ ಬರಲಾಗಿದೆ. ಎಂದು ತಿಳಿಸಿದರು. ಇನ್ನು ಸಾಧುಸಂತರ ಮಾತು ಎಷ್ಟೇ ಉನ್ನತವಾಗಿ ಇದ್ದರೂ, ಆ ಬೋಧೆಯ ಪರಿಣಾಮ ಮಾತ್ರ ಸೊನ್ನೆಯೇ ಆಗಿದೆಯೆಂಬುದು ಶೋಚನೀಯ. ಇದಕ್ಕೆ ಕಾರಣಗಳು ಎರಡು. ಮೊದಲನೆಯದಾಗಿ ಸಾಧು ಸಂತರಲ್ಲಿ ಒಬ್ಬರೂ ಜಾತಿ ಪದ್ಧತಿಯ ಮೇಲೆ ದಾಳಿ ಮಾಡಲಿಲ್ಲ. ತದ್ವಿರುದ್ಧವಾಗಿ ಜಾತಿಪದ್ಧತಿಗೆ ಅವರು ಪರಮನಿಷ್ಠರಾಗಿದ್ದರು. ಅವರಲ್ಲಿ ಬಹುಪಾಲ ಜನ ತಂತಮ್ಮ ಜಾತಿಗಳ ಸದಸ್ಯರಾಗಿಯೇ ಬದುಕಿದರು. ಹಾಗೂ ಆಯಾ ಜಾತಿಯವರಾಗಿಯೇ ಸತ್ತರು. ಜ್ಞಾನದೇವನಿಗೆ ತಾನು ಬ್ರಾಹ್ಮಣನೆಂಬ ಅಭಿಮಾನ ಎಷ್ಟು ತೀವ್ರವಾಗಿತ್ತು ಗೊತ್ತೆ? ಪೈಠಣದ ಬ್ರಾಹ್ಮಣರು ಆತನನ್ನು ತಮ್ಮಲ್ಲಿ ಸೇರಿಕೊಳ್ಳಲು ಒಪ್ಪಲಿಲ್ಲ. ಆಗ ಬ್ರಾಹ್ಮಣ ಸಮಾಜವು ತನ್ನನ್ನು ಬ್ರಾಹ್ಮಣನೆಂದು ಸಮ್ಮತಿಸುವಂತೆ ಅವನು ವಿಶ್ವಪ್ರಯತ್ನ ಮಾಡಿದನು. ಸಂತ ಏಕನಾಥನು ಅಸ್ಪೃಶ್ಯರನ್ನು ಮುಟ್ಟುವುದಲ್ಲದೆ ಅವರೊಡನೆ ಊಟಮಾಡುವ ಧೈರ್ಯವನ್ನೂ ತೋರಿದನು. ಆ ಧೈರ್ಯ ತೋರಿದ್ದು ಏಕೆ ಗೊತ್ತೆ? ಹಾಗೆ ಮಾಡಿದಾಗ ಅಂಟಿಕೊಂಡ ಮೈಲಿಗೆ ಒಂದು ಗಂಗಾಸ್ನಾನದಿಂದ ತೊಳೆದು ಹೋಗುವುದೆಂದು ಅವನಿಗೆ ವಿಶ್ವಾಸವಿತ್ತು. ಸಂತರು ಜಾತಿ ಮತ್ತು ಅಸ್ಪೃಶ್ಯತೆಯ ವಿರುದ್ಧವಾಗಿ ಎಂದೂ ಆಂದೋಲನ ನಡೆಸಲಿಲ್ಲವೆಂದು ಅಂಬೇಡ್ಕರ್ ಅರಿತುಕೊಂಡಿದ್ದರು. ಜೀವಾತ್ಮ-ಪರಮಾತ್ಮರ ಸಂಬಂಧವೇ ಅವರಿಗೆ ಮುಖ್ಯವಾಗಿತ್ತು. ಮನುಷ್ಯರೆಲ್ಲಾ ಸಮಾನರೆಂದು ಅವರು ಬೋಧಿಸಲಿಲ್ಲ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರೆಂದು ಮಾತ್ರ ಹೇಳಿದರು. ಎಂಬ ಅಂಬೇಡ್ಕರ್ ಅಭಿಪ್ರಾಯಗಳಲ್ಲಿ ಸನಾತನ ಎಂಬುದು ಮೌಢ್ಯದಿಂದ ಕೂಡಿದೆ ಇದು ಜಂಗಮ ಸ್ವರೂಪಿ ಯಾಗದು ಎಂಬುದು ತಿಳಿಯುತ್ತದೆ. ಸಾಧುಸಂತರೂ ಮಹಾತ್ಮರೂ ಭಾರತದಲ್ಲಿ ಗೌರವಾರ್ಹ ವ್ಯಕ್ತಿಗಳಾಗಿದ್ದಾರೆ. ಆದರೆ ಅನುಕರಣೀಯ ವ್ಯಕ್ತಿಗಳಲ್ಲ ಎಂಬುದು ಜನಸಾಮಾನ್ಯರ ಮನೋಭಾವ. ಹೀಗಿರುವಾಗ, ನಮ್ಮ ಸಮಸ್ಯೆಗೆ ಸಾಧುಸಂತರಿಂದೇನೂ ಫಲವಾಗಿಲ್ಲ. ಇದನ್ನು ಗಾಂಧೀಜಿ ಒಪ್ಪಬೇಕಾಗುತ್ತದೆ. ಚೈತನ್ಯ, ಜ್ಞಾನದೇವ, ತುಕಾರಾಮ, ತಿರುವಳ್ಳುವರ್, ರಾಮಕೃಷ್ಣ ಪರಮಹಂಸ ಮುಂತಾದವರು ತಮ್ಮದೆಂದು ಒಪ್ಪಿಕೊಂಡ ಧರ್ಮ ಯೋಗ್ಯತೆಯಿಲ್ಲದುದು ಅಲ್ಲವೆಂಬುದೂ, ಧರ್ಮದ ಯೋಗ್ಯತೆಯನ್ನು ಅಳೆಯಬೇಕಾದ್ದೂ ಅದರ ಅಯೋಗ್ಯ ಮಾದರಿಗಳಿಂದ ಅಲ್ಲ, ಅತ್ಯುತ್ತಮ ಮಾದರಿಗಳಿಂದ ಎಂದು ಗಾಂಧೀಜಿ ಹೇಳುತ್ತಾರೆ. ಗಾಂಧೀಜಿ ಅಭಿಪ್ರಾಯ ತಪ್ಪೆಂಬುದಕ್ಕೆ ಇನ್ನೂ ಒಂದು ಕಾರಣವಿದೆ. ಚೈತನ್ಯ ಮೊದಲಾದ ಪ್ರಖ್ಯಾತರ ಉದಾಹರಣೆಯಿಂದ ಮಹಾತ್ಮರು ಸೂಚಿಸ ಬಯಸುವುದನ್ನು ಉಚ್ಚಜಾತಿಯ ಜನರೆಲ್ಲರೂ ಕೀಳುಜಾತಿಯ ಜನರೊಡನೆ ಉತ್ತಮ ನೀತಿ ಮಟ್ಟದಲ್ಲಿ ನಡೆದುಕೊಂಡರೆ, ಯಾವ ಬದಲಾವಣೆಯೂ ಅವಶ್ಯವಾಗದೆ ಈಗಿರುವ ಸ್ವರೂಪದಲ್ಲಿಯೇ ಹಿಂದೂ ಸಮಾಜವು ಸಹನೀಯವಾಗಬಲ್ಲದು ಎಂಬುದು ಅವರ ಉದ್ದೇಶ, ಈ ಒಳ್ಳೆಯ ವಿಚಾರ ಸರಣಿಗೆ ಅಂಬೇಡ್ಕರ್ ವಿರೋಧಿಯಾಗಿದ್ದರು. ತಮ್ಮ ಜೀವನದಲ್ಲಿ ಉನ್ನತವಾದ ಸಾಮಾಜಿಕ ಆದರ್ಶವನ್ನು ಸಾಧಿಸುತ್ತಿರುವ ಮೇಲುಜಾತಿಯ ಹಿಂದೂಗಳನ್ನು ಅಂಬೇಡ್ಕರ್ ಗೌರವಿಸುತ್ತಿದ್ದರು. ಇಂತಹ ವ್ಯಕ್ತಿಗಳಿಲ್ಲದೆ ಹೋದರೆ ಭಾರತ ದೇಶದ

ಬದುಕು ಇನ್ನಷ್ಟು ಕಷ್ಟಕರವೂ ಅಸಹ್ಯವೂ ಆದೀತು. ಆದರೆ ವೈಯಕ್ತಿಕ ಚಾರಿತ್ರ ಸುಧಾರಣೆಯಿಂದಲೇ ಜಾತಿವಂತ ಹಿಂದೂಗಳನ್ನೆಲ್ಲ ಉತ್ತಮ ವ್ಯಕ್ತಿಗಳಾಗಿ ಪರಿವರ್ತಿಸುವ ಪ್ರಯತ್ನವು ಶ್ರಮದ ಅಪವ್ಯಯವಾಗುತ್ತದೆ. ಭ್ರಾಂತಿಗೆ ಜೋತುಬಿದ್ದಂತೆ ಆಗುತ್ತದೆ. ಜಾತಿ ಪ್ರಜ್ಞೆ ಜಾಗೃತವಾಗಿರುವ ಮನುಷ್ಯನ ಚಾರಿತ್ರ ಒಳ್ಳೆಯದಾದರೆ ಅವನು ಒಳ್ಳೆಯ ಮನುಷ್ಯನಾಗುವನೆ? ಎಂದರೆ ತನ್ನ ನೆರೆಹೊರೆಯವರನ್ನೇ ತನ್ನ ಮಿತ್ರರೆಂದೂ ಸಮಾನರೆಂದೂ ನಡೆಸಿಕೊಳ್ಳುವನೆ? ತನ್ನ ಸ್ಥಿತಿಗನುಸಾರವಾಗಿ ಅವರಿಗಿಂತ ಮೇಲಿನವನೆಂತಲೂ ಕೆಳಗಿನವನೆಂತಲೂ ಅವನು ನಡೆದುಕೊಳ್ಳಬೇಕಾಗುತ್ತದೆ. ಎಂದರೆ ತನ್ನ ಜಾತಿಯವರೊಡನೆ ನಡೆದುಕೊಂಡಂತೆ ಇತರರೊಡನೆ ನಡೆದುಕೊಳ್ಳಲಾಗುವುದಿಲ್ಲ. ಎಲ್ಲರನ್ನೂ ತನ್ನ ಬಂಧುಗಳೆಂದು ಸಮಾನರೆಂದು ಅವನು ಕಾಣಲಾರನು. ವಾಸ್ತವವಾಗಿ ನೋಡಿದರೆ ತನ್ನ ಜಾತಿಯವರಲ್ಲದ ಜನರೊಡನೆ ಅವರಾರೋ ಪರಕೀಯರೆಂಬಂತೆಯ ಹಿಂದೂವು ವ್ಯವಹರಿಸುತ್ತಾನೆ. ಏನು ಮಾಡಿದರೂ ಭಯವಿಲ್ಲ, ಎಂತಹ ವಂಚನೆ ಮಾಡಿದರೂ ನಾಚಬೇಕಾಗಿಲ್ಲ ಎಂಬ ಮನೋವೃತ್ತಿ ಅವನ ನಡವಳಿಕೆಯಲ್ಲಿ ಕಾಣುತ್ತದೆ. ಇತರರಿಗಿಂತ ಉತ್ತಮವಾದ ಹಿಂದೂ ಇರಬಹುದು, ಇತರರಿಗಿಂತ ಕೀಳಾದ ಹಿಂದೂ ಇರಬಹುದು. ಆದರೆ ಒಳ್ಳೆಯ ಹಿಂದೂ ಇರಲಾರನು. ಅವನ ವೈಯಕ್ತಿಕ ಸ್ವಭಾವ ಅದಕ್ಕೆ ಕಾರಣವಲ್ಲ, ತನ್ನ ದೇಶ ಬಾಂಧವರೊಡನೆ ಅವನಿಟ್ಟುಕೊಂಡಿರುವ ಸಂಬಂಧದ ಮೂಲಾಧಾರ ತಪ್ಪಾಗಿದೆ. ಈ ಸಂಬಂಧ ತಪ್ಪಾಗಿದ್ದರೆ ಎಂತಹ ಉತ್ತಮ ಮನುಷ್ಯನೂ ನೀತಿವಂತನಾಗಿ ಉಳಿಯಲಾರನು. ಗುಲಾಮರನ್ನು ಇಟ್ಟುಕೊಂಡಿರುವವನು ಇತರರಿಗಿಂತ ಉತ್ತಮನಾಗಿರಬಹುದು ಅಥವಾ ಹೆಚ್ಚು ಕೀಳಾಗಿರಬಹುದು. ಆದರೆ ಗುಲಾಮನಿಗೆ ಒಳ್ಳೆಯ ಒಡೆಯನಿರುವುದಿಲ್ಲ. ಒಳ್ಳೆಯ ಮನುಷ್ಯನು ಒಡೆಯನಾಗಿರಲಾರ. ಮತ್ತು ಒಡೆಯ ಒಳ್ಳೆಯ ಮನುಷ್ಯನಾಗಿರಲಾರ, ಮೇಲುಜಾತಿ ಹಾಗೂ ಕೆಳಜಾತಿಗಳ ಸಂಬಂಧಕ್ಕೂ ಇದೇ ಮಾತು ಅನ್ವಯಿಸುತ್ತವೆ. ಮೇಲುಜಾತಿಯವನು ಒಳ್ಳೆಯ ಮನುಷ್ಯನಾಗಿ ಇರಲಾರ ಏಕೆಂದರೆ ತಾನು ಮೇಲುಜಾತಿಯವನಾಗಿ, ಉಳಿಯಬೇಕಾಗಿದ್ದರೆ, ಕೆಳಜಾತಿಯೊಂದು ಇದ್ದೇ ಇರಬೇಕಲ್ಲವೆ? ತನ್ನ ಮೇಲೊಬ್ಬನು ಮೇಲು ಜಾತಿಯವನಿದ್ದಾನೆಂಬ ಪ್ರಜ್ಞೆ ಕೆಳಜಾತಿಯವನಿಗೆ ಒಳ್ಳೆಯದಲ್ಲ. ವರ್ಣ ಅಥವಾ ಜಾತಿಪದ್ಧತಿಯನ್ನು ಆಧರಿಸಿದ ಸಮಾಜವು ತಪ್ಪು ಸಂಬಂಧವನ್ನೇ ಆಧರಿಸಿದೆ ಎಂದು ಅಂಬೇಡ್ಕರ್ ತಮ್ಮ ಅಭಿಪ್ರಾಯಗಳನ್ನು ನಿಷ್ಠುರವಾಗಿ ತಿಳಿಸಿದ್ದಾರೆ. ಪ್ರತಿಯೊಬ್ಬರೂ ತಮ್ಮ ಕುಲವೃತ್ತಿಯನ್ನೇ ಕೈಗೊಳ್ಳಬೇಕಾದುದು ತಲೆಹಿಡುಕನ ವಂಶದವರು ತಲೆಹಿಡುಕರಾಗಿಯೆ ಬದುಕತಕ್ಕದ್ದು, ಮತ್ತು ವೇಶ್ಯೆಯ ಮೊಮ್ಮಗಳು ವೇಶ್ಯೆಯೇ ಆಗಿರತಕ್ಕದ್ದು ಎಂದಾಗುತ್ತದೆ. ತಮ್ಮ ತತ್ವದ ಮೇರೆಗೆ ತರ್ಕಬದ್ಧವಾಗಿ ಬರುವ ನಿರ್ಣಯವನ್ನು ಗಾಂಧೀಜಿ ಒಪ್ಪಿಕೊಳ್ಳುವರೆ? ಈ ಪ್ರಾಚೀನ ಕುಲವೃತ್ತಿಯ ಆದರ್ಶವು ಅವ್ಯವಹಾರವೂ ಆಗಿರುವುದಷ್ಟೆ ಅಲ್ಲದೆ, ನೈತಿಕವಾಗಿ ಅಸಮರ್ಥನೀಯವೂ ಆಗಿದೆ. ಬ್ರಾಹ್ಮಣನು ಕೊನೆವರೆಗೆ ಬ್ರಾಹ್ಮಣನಾಗೇ ಉಳಿಯುವುದು ಉತ್ಕೃಷ್ಟವೆಂದು ಗಾಂಧೀಜಿಗೆ ತೋರಿದೆ. ಜೀವನಾಂತ್ಯದವರೆಗೆ ಬ್ರಾಹ್ಮಣರಾಗಿಯೆ ಉಳಿಯಲು ಬಯಸದಂತಹ ಬ್ರಾಹ್ಮಣರು ಅನೇಕರಿದ್ದಾರೆಂಬುದು ವಸ್ತುಸ್ಥಿತಿ. ಆ ಮಾತು ಹಾಗಿರಲಿ. ತಮ್ಮ ಕುಲಪರಂಪರಾಗತ ವೃತ್ತಿಯಾದ ಪೌರೋಹಿತ್ಯ ಅಥವಾ ಪೂಜಾರಿತನಕ್ಕೆ ಗಟ್ಟಿಯಾಗಿ ಅಂಟಿಕೊಂಡಿರುವ ಬ್ರಾಹ್ಮಣರ ವಿಷಯವಾಗಿ ಏನೆನ್ನೋಣ? ಇದು ಪ್ರಾಚೀನ ಕಾಲದಿಂದ ನಡೆದುಬಂದ ತಮ್ಮ ಕುಲವೃತ್ತಿಯೆಂಬ ಶ್ರದ್ದೆಯಿಂದ ಅದನ್ನು ಅವರು ನಡೆಸುವರೆ? ಅಥವಾ ಧನಲಾಭದ

ದುರಾಸೆಯಿಂದ ಆ ವೃತ್ತಿಗೆ ಅಂಟಿಕೊಂಡಿರುವರೇ? ಇಂತಹ ಪ್ರಶ್ನೆಗಳನ್ನು ಗಾಂಧೀಜಿ ವಿಚಾರಿಸುವುದಕ್ಕೆ ಹೋಗುವುದಿಲ್ಲ. "ಧಾರಾಳವಾಗಿ ಕೊಟ್ಟ ದಾನದಿಂದ ಜೀವಿಸುತ್ತ ತಮ್ಮ ಆಧ್ಯಾತ್ಮಿಕ ಸಂಪತ್ತನ್ನು ಜನರಿಗೆ ಹಂಚುತ್ತಿರುವ ನಿಜವಾದ ಬ್ರಾಹ್ಮಣರು" ಇದ್ದಾರೆಂಬುದೇ ಗಾಂಧೀಜಿಗೆ ತೃಪ್ತಿಕರವಾಗಿದೆ. ಜನಕ್ಕೆ ಆಧ್ಯಾತ್ಮಿಕ ಸಂಪತ್ತನ್ನು ಒಯ್ದು ಮುಟ್ಟಿಸುವ ಕಾರ್ಯದಲ್ಲಿ ಸಂಪ್ರದಾಯಸ್ಥ ಬ್ರಾಹ್ಮಣ ನಿರತನಾಗಿರುವನೆಂದು ಅವರಿಗೆ ತೋರಿದೆ. ಎಂದು ಅಂಬೇಡ್ಕರ್ ತಿಳಿಸುತ್ತಾರೆ. ಸಂಪ್ರದಾಯಸ್ಥ ಬ್ರಾಹ್ಮಣನ ಇನ್ನೊಂದು ಚಿತ್ರವನ್ನೂ ನಾವು ಕೊಡಬಲ್ಲೆವು. ಬ್ರಾಹ್ಮಣನು ಪ್ರೇಮದೇವತೆಯಾದ ವಿಷ್ಣುವಿಗೆ ಪೂಜಾರಿಯಾಗಬಲ್ಲನು. ಪ್ರಳಯ ದೇವತೆಯಾದ ಶಂಕರನಿಗೂ ಅವನು ಪೂಜಾರಿಯಾಗಬಲ್ಲನು. ಜಗತ್ತಿಗೆ ಪ್ರೇಮದ ಸಂದೇಶವನ್ನು ಬೀರಿದ ಮಹಾಗುರು ಬುದ್ಧನಿಗೂ ಅವನು ಪೂಜಾರಿಯಾಗಬಲ್ಲನು. ಪ್ರತಿದಿನ ಪಶುಬಲಿಯನ್ನು ಬೇಡುವ ಕಾಳಿದೇವಿಗೂ ಅವನು ಪೂಜಾರಿ, ಕ್ಷತ್ರಿಯ ನಾಶಕ್ಕೆ ಅವತಾರವೆತ್ತಿದ ಪರಶುರಾಮನಿಗೂ ಅವನು ಪೂಜಾರಿ. ಸೃಷ್ಟಿಕರ್ತನಾದ ಬ್ರಹ್ಮದೇವರಿಗೂ ಅವನು ಪೂಜಾರಿಯಾಗಬಲ್ಲನು. ಇದು ಸುಳ್ಳು ಎಂದು ಯಾರೂ ಹೇಳಲಾರರು, ಪರಸ್ಪರ ವಿರುದ್ಧ ಗುಣಗಳುಳ್ಳ ವಿವಿಧ ದೇವತೆಗಳಿಗೆಲ್ಲಾ ನಿಷ್ಠೆ ತೋರುವವನಾದರೆ, ಆ ಮನುಷ್ಯ ಪ್ರಾಮಾಣಿಕ ಭಕ್ತನೆಂದು ಹೇಳಲಾಗದು. ಇದು ತಮ್ಮ ಧರ್ಮದಲ್ಲಿರುವ ಔದಾರ್ಯ ಭಾವನೆಗೆ, ಸಹಿಷ್ಣುತಾ ಭಾವಕ್ಕೆ ಸಾಕ್ಷಿಯೆಂದು ಹಿಂದೂಗಳು ನಂಬುತ್ತಾರೆ. ಇದು ಸಹಿಷ್ಣುತೆಯಾಗಿರದೆ ಎಲ್ಲ ದೇವರ ಬಗೆಗೆ ತಾಳಿರುವ ಉಪೇಕ್ಷೆ ಅಥವಾ ಅಶಕ್ತನು ತೋರುವ ಉದಾಸೀನವೃತ್ತಿ ಆಗಿರಬಹುದು. ಈ ಎರಡೂ ಮನೋವೃತ್ತಿಗಳು ಹೊರನೋಟಕ್ಕೆ ಒಂದೇ ಎಂಬಂತೆ ತೋರಬಹುದು. ಆದರೆ ಪರೀಕ್ಷಿಸಿ ನೋಡಿದಾಗ ಅವೆರಡರಲ್ಲಿ ಮೂಲಭೂತವಾದ ಭೇದವನ್ನು ಕಾಣಬಹುದು.

KEYWORDS:

ಬಿ.ಆರ್. ಅಂಬೇಡ್ಕರ್, ಗಾಂಧೀಜಿ, ವರ್ಣ, ಹಿಂದುತ್ವ, ದೇವರು, ಧರ್ಮ, ಜಾತಿಪದ್ದತಿ.

ಅನೇಕ ದೇವತೆಗಳಿಗೆ ಪೂಜೆ ಸಲ್ಲಿಸುವುದು ಸಹಿಷ್ಣುತೆಗೆ ಅಥವಾ ಉದಾರ ಭಾವನೆಗೆ ನಿದರ್ಶನವೆಂದು ಹೇಳಲಾಗುತ್ತದೆ. ಸಂದರ್ಭಕ್ಕೆ ತಕ್ಕಂತೆ ಅನುಕೂಲ ಸಿಂಧುವನ್ನಾಶ್ರಯಿಸುವ ವಂಚಕ ವೃತ್ತಿಗೂ ಇದು ನಿದರ್ಶನವಾಗಬಹುದಲ್ಲವೆ? ಈ ಸಹಿಷ್ಣುತೆ ಕೇವಲ ಕಪಟಾಚರಣೆಯೆಂದು ನನಗೆ ಖಾತ್ರಿಯಾಗಿದೆ. ಎಂದು ತನಗೆ ಲಾಭಕರವಾಗುವಂತಿದ್ದರೆ ಯಾವ ದೇವರನ್ನಾದರೂ ಪೂಜಿಸಲು, ಯಾವ ದೇವರಿಗಾದರೂ ಭಕ್ತನಾಗಲು ಸಿದ್ಧನಾಗುವಂತಹ ಮನುಷ್ಯನಲ್ಲಿ ಅದೆಂತಹ ಆಧ್ಯಾತ್ಮಿಕ ಸಂಪತ್ತು ತುಂಬಿದ್ದೀತು? ಇಂತಹವರಲ್ಲಿ ಆಧ್ಯಾತ್ಮಿಕ ಸಂಪತ್ತಿಲ್ಲವೆಂಬುದಷ್ಟೇ ಅಲ್ಲ, ಶ್ರದ್ದೆಯಿಲ್ಲದೆ, ನಿಷ್ಠೆಯಿಲ್ಲದೆ, ತಂದೆಯಿಂದ ಮಗನಿಗೆ ಪರಂಪರಾಗತವಾಗಿ ಬಂದ ಯಾಂತ್ರಿಕ ವೃತ್ತಿಯೆಂದು ಅದನ್ನು ಪಾಲಿಸುತ್ತಾ ಬರುವುದು ಸದ್ಗುಣವಲ್ಲ. ಸಚ್ಚಾರಿತ್ರವೂ ಅಲ್ಲ:ಧರ್ಮಸೇವೆಯಾಗಿರುವ ಒಂದು ಉದಾತ್ತ ವೃತ್ತಿಯ ದುರುಪಯೋಗವೇ

ಆಗಿದೆ, ನಿಜವಾಗಿ, ಪ್ರತಿಯೊಬ್ಬನೂ ತನ್ನ ಪರಂಪರಾಗತ ಕುಲವೃತ್ತಿಯನ್ನೇ ಪಾಲಿಸಿಕೊಂಡು ಬರಬೇಕೆಂಬ ತತ್ವಕ್ಕೆ ಗಾಂಧೀಜಿ ಅದೇಕೆ ಅಂಟಿಕೊಳ್ಳುತ್ತಾರೆ? ಅದಕ್ಕೆ ಎಲ್ಲಿಯಾದರೂ ಅವರು ಕಾರಣಗಳನ್ನು ವಿವರಿಸಿಲ್ಲ. ಅವರು ಹೇಳದಿದ್ದರೂ ಅದಕ್ಕೆ ಏನೋ ಕಾರಣವಿದ್ದಿರಲೇಬೇಕು. ಕೆಲ ವರ್ಷಗಳ ಹಿಂದೆ ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಜಾತಿ ಮತ್ತು ವರ್ಗ ಎಂಬ ವಿಷಯವಾಗಿ ಬರೆಯುತ್ತಾ, ಸಾಮಾಜಿಕ ಭದ್ರತೆಯ ದೃಷ್ಟಿಯಿಂದ ವರ್ಗಕ್ಕಿಂತ ಜಾತಿಯಿಂದಲೇ ಹೆಚ್ಚು ಸಮರ್ಪಕವಾದ ಹೊಂದಾಣಿಕೆ ಸಾಧ್ಯವಾಗುವುದರಿಂದ ವರ್ಗಕ್ಕಿಂತ ಜಾತಿಯೇ ಮೇಲೆಂದು ಅವರು ವಾದಿಸಿದ್ದರು. ಕುಲವೃತ್ತಿಯನ್ನೆ ಪಾಲಿಸಬೇಕೆಂಬ ಅವರ ವಾದಕ್ಕೆ ಇದೇ ಕಾರಣವಾಗಿದ್ದರೆ, ಸಾಮಾಜಿಕ ಜೀವನದ ಬಗೆಗೆ ಅವರ ಅಭಿಪ್ರಾಯ ತಪ್ಪೆಂದು ಹೇಳಬೇಕಾಗುತ್ತದೆ. ಸಾಮಾಜಿಕ ಭದ್ರತೆಯನ್ನು ಎಲ್ಲರೂ ಅಪೇಕ್ಷಿಸುತ್ತಾರೆ: ಭದ್ರತೆ ಬೇಕಾದರೆ ವ್ಯಕ್ತಿ ವ್ಯಕ್ತಿಗಳ ನಡುವೆ ಮತ್ತು ವರ್ಗವರ್ಗಗಳ ನಡುವೆ ಇರುವ ಸಂಬಂಧಗಳಲ್ಲಿ ಅಷ್ಟಿಷ್ಟು ಹೊಂದಾಣಿಕೆಯನ್ನು ಸಾಧಿಸಲೇಬೇಕಾಗುತ್ತದೆ. ಆದರೆ ಪ್ರತಿಯೊಬ್ಬರಿಗೂ ಬೇಡವಾದ ಎರಡು ಅಂಶಗಳಿವೆ. ಮೊದಲನೆಯದಾಗಿ, ಬದಲಾವಣೆ ಮಾಡಲಾಗದಂತೆ, ಎಲ್ಲಾ ಕಾಲಕ್ಕೂ ಸ್ಥಿರವಾಗಿ ಅಚಲವಾಗಿರುವಂತಹ ಸಂಬಂಧ ಬೇಡವಾಗಿದೆ. ಭದ್ರತೆ ಬೇಕು, ಆದರೆ ಬದಲಾವಣೆ ಅವಶ್ಯಕವಾದಾಗಲೂ ಅದಕ್ಕೆ ಆಸ್ಪದವೀಯದಂತಹ ವ್ಯವಸ್ಥೆಯಿಂದ ಆದಾಗುವುದಾದರೆ ಬೇಡ. ಎರಡನೆಯದಾಗಿ, ಕೇವಲ ಹೊಂದಾಣಿಕೆ ಯಾರಿಗೂ ಬೇಡವಾಗಿದೆ. ಹೊಂದಾಣಿಕೆ ಬೇಕು. ಆದರೆ ಅದರಿಂದ ಸಾಮಾಜಿಕ ನ್ಯಾಯಕ್ಕೆ ಚ್ಯುತಿಯಾಗಕೂಡದು. ಜಾತಿಪದ್ಧತಿ ಎಂದರೆ ಪರಂಪರಾಗತ ಕುಲವೃತ್ತಿಯ ಪಾಲನೆಯಿಂದ, ಸಾಮಾಜಿಕ ಸಂಬಂಧ ಹೊಂದಾಣಿಕೆ ಮಾಡಹೊರಟರೆ ಈ ಎರಡು ಅನಿಷ್ಟಗಳನ್ನು ತಪ್ಪಿಸಲಾದೀತೆ? ಆಗ ನನಗೆ ಮನವರಿಕೆ ಸಾಮಾಜಿಕ ಹೊಂದಾಣಿಕೆಯ ಮುಖ್ಯ ತತ್ವಗಳಾದ ಸಮಾನತೆ ಹಾಗೂ ಪರಿವರ್ತನಶೀಲತೆ ಇವೆರಡಕ್ಕೂ ವಿರೋಧ ಒಡ್ಡುವುದಾದ್ದರಿಂದ ಇದು ಹೊಂದಾಣಿಕೆ ಉತ್ತಮ ಉಪಾಯವಾಗುವುದಿಲ್ಲ;ತದ್ವಿರುದ್ಧವಾಗಿ ಅತ್ಯಂತ ಕೆಟ್ಟ ಉಪಾಯವಾಗುತ್ತದೆ. ಜಾತಿಯನ್ನು ಅಲ್ಲಗಳೆದು ವರ್ಗದಲ್ಲಿ ಮಾತ್ರ ಶ್ರದ್ಧೆ ತಾಳಿರುವುದರಿಂದ ಗಾಂಧೀಜಿ ಪ್ರಗತಿ ಸಾಧಿಸಿದ್ದಾರೆಂದು ತೋರಬಹುದು. ಒಂದು ಕಾಲಕ್ಕೆ ಗಾಂಧೀಜಿ ಕಟ್ಟಾ ಸನಾತನ ಹಿಂದೂವಾಗಿದ್ದರೆಂಬುದು ಸತ್ಯ. ವೇದ, ಉಪನಿಷತ್ತು, ಪುರಾಣಗಳು–ಹಿಂದೂ ಧರ್ಮ ಗ್ರಂಥಗಳೆಂದು ಯಾವ ಯಾವುದಕ್ಕೆ ಹೆಸರಿದೆಯೊ ಅಂತಹ ಎಲ್ಲವುಗಳಲ್ಲಿ ನಂಬಿಕೆಯಿತ್ತು. ಅದರಿಂದಾಗಿ ಅವತಾರಗಳನ್ನೂ ಪುನರ್ಜನ್ಮಗಳನ್ನೂ ಅವರು ನಂಬಿದ್ದರು. ಜಾತಿಪದ್ಧತಿಯಲ್ಲಿ ಶ್ರದ್ಧೆಯಿಟ್ಟುಕೊಂಡು, ಸಂಪ್ರದಾಯಶೀಲರಂತೆ ಜೋರಾಗಿ ಅದನ್ನು ಸಮರ್ಥಿಸುತ್ತಿದ್ದರು. ಬೇರೆ ಜಾತಿಯವರೊಡನೆ ಊಟ, ಜಲಪಾನ, ಮದುವೆಗಳ ಬೇಡಿಕೆಗಳನ್ನು ಖಂಡಿಸುತ್ತಿದ್ದರು. ಅಂತರ್ಜಾತೀಯ ಭೋಜನ ನಿಷೇಧವು “ಸಂಕಲ್ಪ ಬಲದ ಸಂವರ್ಧನೆಗೂ ಕೆಲವು

ಸಾಮಾಜಿಕ ಸದ್ಗುಣಗಳ ರಕ್ಷಣೆಗೂ ಸಹಾಯಕಾರಿ"ಯೆಂದು ವಾದಿಸುತ್ತಿದ್ದರು. "ಜಾತಿಪದ್ಧತಿಯು ಆಧ್ಯಾತ್ಮಿಕ ಹಾಗೂ ರಾಷ್ಟ್ರೀಯ ಅಭಿವೃದ್ಧಿಗೆ ಆಂತಕಕಾರಿಯೆಂದು" ಅವರು ಒಪ್ಪಿದ್ದರು. ಗಾಂಧೀಜಿ ಎತ್ತಿ ಹಿಡಿಯುವ ಈ ವರ್ಣವೆಂತಹುದು? ಸ್ವಾಮಿ ದಯಾನಂದ ಸರಸ್ವತಿ ಹಾಗೂ ಅವರ ಅನುಯಾಯಿಗಳಾದ ಆರ್ಯ ಸಮಾಜಗಳು ಬೋಧಿಸುವ ವೈದಿಕ ವರ್ಣವೆ? ವ್ಯಕ್ತಿಯ ನೈಸರ್ಗಿಕ ಪ್ರವೃತ್ತಿ ಅಥವಾ ಸಾಮರ್ಥ್ಯಕ್ಕೆ ಅನುಗುಣವಾದ ವೃತ್ತಿಯನ್ನು ಅನುಸರಿಸಬೇಕೆಂಬುದು ವೈದಿಕ ವರ್ಣದ ಮುಖ್ಯ ತತ್ವ, ನೈಸರ್ಗಿಕ ಪ್ರವೃತ್ತಿಗೆ ಅನುಕೂಲವಾಗಲಿ, ಬಿಡಲಿ, ಪರಂಪರಾಗತವಾದ ಕುಲವೃತ್ತಿಯನ್ನೆ ಅನುಸರಿಸಬೇಕೆಂಬುದು ಗಾಂಧೀಜಿ ಹೇಳುತ್ತಿದ್ದರು. ವರ್ಣಕ್ಕಿರುವ ಮುಖ್ಯ ತತ್ವ. ವರ್ಣ ಮತ್ತು ಜಾತಿ ಇವೆರಡರ ಅಂತರವೇನು? ಏನೂ ಇದ್ದಂತೆ ತೋರುವುದಿಲ್ಲ. ಗಾಂಧೀಜಿ ನೀಡುವ ವ್ಯಾಖ್ಯೆಯ ಮೇರೆಗೆ ವರ್ಣವೆಂಬುದು ಜಾತಿಯ ಇನ್ನೊಂದು ಹೆಸರಾಗುತ್ತದೆ. ಗಾಂಧೀಜಿ ವರ್ಣಕ್ಕೆ ಕೊಡುವ ಅರ್ಥ ವಿವರಣೆ ವೈದಿಕ ವರ್ಣದ ವಿಪರ್ಯಾಸವಾಗಿದ್ದು, ಅಸಹ್ಯ ಆಗಿದೆ. ವರ್ಣ ಮತ್ತು ಜಾತಿ ಎರಡೂ ಸಂಪೂರ್ಣವಾಗಿ ಭಿನ್ನ ಪರಿಕಲ್ಪನೆಗಳು. ವರ್ಣವು ವ್ಯಕ್ತಿಯ ಯೋಗ್ಯತೆಯನ್ನು ಆಧಾರವಾಗಿಟ್ಟುಕೊಳ್ಳುತ್ತದೆ. ಜಾತಿಯು ವ್ಯಕ್ತಿಯ ಜನ್ಮವನ್ನು ಆಧರಿಸುತ್ತವೆ. ಇವೆರಡೂ ಭಿನ್ನವೆಂಬುದಷ್ಟೆ ಅಲ್ಲ. ಪರಸ್ಪರ ವಿರುದ್ಧವೂ ಆಗಿದೆ. ಪ್ರತಿಯೊಬ್ಬರೂ ತಂತಮ್ಮ ಕುಲವೃತ್ತಿಯನ್ನು ಅನುಸರಿಸಬೇಕೆಂಬುದರಲ್ಲಿ ಗಾಂಧೀಜಿ ನಂಬಿಕೆಯಿರುವುದಾದರೆ, ಅವರು ಜಾತಿ ಪದ್ಧತಿಯ ಪ್ರಚಾರವನ್ನೇ ಮಾಡುತ್ತಿದ್ದಾರೆಂದಾಯಿತು ಮತ್ತು ಅದನ್ನು ವರ್ಣವ್ಯವಸ್ಥೆಯೆಂದು ಅವರು ಹೇಳುತ್ತಿರುವುದು ಸುಳ್ಳು ಮಾತ್ರವಲ್ಲದೆ, ಗೊಂದಲಕಾರಿಯಾದ ವಿಚಾರವನ್ನು ಇನ್ನಷ್ಟು ಗೊಂದಲಕಾರಿಯಾಗಿಸುತ್ತಿದ್ದಾರೆ. ಅವರ ಈ ಗೊಂದಲಗೆಟ್ಟ ವಿಚಾರಕ್ಕೆ ಕಾರಣವೇನೆಂದರೆ ವರ್ಣ ಯಾವುದು ಹಾಗೂ ಜಾತಿ ಯಾವುದು ಎಂಬುದು ಸ್ಪಷ್ಟ ಹಾಗೂ ಖಚಿತ ಜ್ಞಾನ ಅವರಿಗಿಲ್ಲ; ಹಿಂದೂ ಧರ್ಮದ ರಕ್ಷಣೆಗೆ ಅವುಗಳಲ್ಲಿ ಯಾವುದು ಅವಶ್ಯಕವೆಂಬ ನಿಶ್ಚಿತ ಅರಿವು ಅವರಲ್ಲಿಲ್ಲ. ಜಾತಿ ಹಿಂದೂ ಧರ್ಮದ ತತ್ವವಲ್ಲವೆಂದು ಅವರು ಹೇಳಿದ್ದಾರೆ. ಹಾಗಾದರೆ ವರ್ಣವೆಂಬುದು ಹಿಂದೂಧರ್ಮದ ಮೂಲ ತತ್ವವೆ? ಇದಕ್ಕೆ ಸ್ಪಷ್ಟ ಉತ್ತರ ಸಾಧ್ಯವಿಲ್ಲ. ಡಾ. ಅಂಬೇಡ್ಕರ್ ಅವರ ದೋಷಾರೋಪಣೆ' ಎಂಬ ಅವರ ಲೇಖನವನ್ನೋದಿದವರು "ಇಲ್ಲ"ವೆಂದೇ ಉತ್ತರಿಸುವರು. ವರ್ಣವು ಹಿಂದೂ ಧರ್ಮದ ಸಾರಭೂತವಾದ ಅಂಗವೆಂದು ಈ ಲೇಖನದಲ್ಲಿ ಅವರು ಹೇಳಿಲ್ಲ. ಅದಕ್ಕೆ ಬದಲಾಗಿ ಅವರು ಹೇಳಿರುವುದು ಹೀಗೆ; "ಹಿಂದೂ ಧರ್ಮದ ಮೂಲ ತತ್ವವೆಂದರೆ ಸತ್ಯಸ್ವರೂಪನಾದ ಒಬ್ಬನೇ ಒಬ್ಬ ದೇವರಿದ್ದಾನೆ ಎಂಬುದು ಮತ್ತು ಮಾನವ ಕುಟುಂಬದ ಧರ್ಮ ಅಹಿಂಸೆಯೆಂಬುದು." ಆದರೆ ಶ್ರೀ ಸಂತರಾಮರಿಗೆ ಉತ್ತರವಾಗಿ ಬರೆದ ಲೇಖನದಲ್ಲಿ ಅವರು ಹೀಗೆಂದಿದ್ದಾರೆ: "ಕುರಾನ್‌ನನ್ನು ಒಪ್ಪದವನು ಮುಸಲ್ಮಾನನಾಗಿ ಉಳಿಯುವುದು ಸಾಧ್ಯವೆ? ಬೈಬಲ್ಲನ್ನು

ನಿರಾಕರಿಸಿದವನು ಕ್ರೈಸ್ತನಾಗಿ ಉಳಿಯುವುದು ಸಾಧ್ಯವೆ?'' ವರ್ಣ ಮತ್ತು ಜಾತಿ ಎರಡೂ ಪರಸ್ಪರ ಪರ್ಯಾಯ ಪದಗಳಾಗಿದ್ದರೆ ಹಿಂದೂ ಧರ್ಮವನ್ನು ವ್ಯಾಖ್ಯಾನ ಮಾಡುವ ಶಾಸ್ತ್ರಗಳಲ್ಲಿ ವರ್ಣವೇ ಮುಖ್ಯ ಅಂಶವಾಗಿದ್ದರೆ, ಜಾತಿ ಎಂದರೆ ವರ್ಣವನ್ನು ನಿರಾಕರಿಸುವವನು. ತನ್ನನ್ನು ಹಿಂದೂ ಎಂದು ಹೇಗೆ ಕರೆದುಕೊಳ್ಳಬಲ್ಲನು? ನುಣುಚಿಕೊಳ್ಳುವಂತೆ ಈ ಬಗೆಯ ಸಂದಿಗ್ಧ ಮಾತುಗಳೇಕೆ? ಗಾಂಧೀಜಿ ಯಾರ ಕೈಗೂ ಸಿಕ್ಕದಂತೆ ಪ್ರಯತ್ನಿಸುವುದೇಕೆ? ಯಾರನ್ನು ಮೆಚ್ಚಿಸಬಯಸುತ್ತಾರೆ? ಈ ಸಂತರಿಗೆ ಸತ್ಯಹೊಳೆದಿಲ್ಲವೇ? ಅಥವಾ ಸಂತನ ಕಾಣ್ಕೆಗೆ ರಾಜಕಾರಣಿ ಅಡ್ಡವಾಗಿ ನಿಂತಿದ್ದಾನೆಂದು ತೋರುತ್ತದೆ. ಜಾತಿಯಲ್ಲಿ ನಂಬಿಕೆಯನ್ನು ಬಿಟ್ಟಂತೆ ವರ್ಣದಲ್ಲಿಯ ನಂಬಿಕೆಯನ್ನು ಬಿಡಬೇಕೆಂದು ಎನಿಸುವವರೆಗೆ ಗಾಂಧೀಜಿ ಅದನ್ನು ತೊರೆಯಲಾರರು. ಜಾತಿ ಮತ್ತು ವರ್ಣವನ್ನು ಗಾಂಧೀಜಿ ಯಾವಾಗಲೂ ಸಮರ್ಥಿಸುವುದೇಕೆಂದು ಈಗ ತಿಳಿಯಿತಲ್ಲವೆ? ಅವುಗಳನ್ನು ವಿರೋಧಿಸಿದರೆ ರಾಜಕಾರಣದಲ್ಲಿ ತಮಗೆ ಸ್ಥಾನ ಉಳಿಯದು. ಅದೇನೆ ಇರಲಿ, ವರ್ಣದ ಹೆಸರಿನಿಂದ ಜಾತಿಯನ್ನು ಸಮರ್ಥಿಸುವಲ್ಲಿ ಆತ್ಮವಂಚನೆಯ ಜತೆಗೆ ಪರವಂಚನೆಯನ್ನೂ ಮಾಡುತ್ತಿದ್ದೀರೆಂದು ಗಾಂಧೀಜಿಗೆ ನಾವು ಹೇಳಲೇಬೇಕಾಗಿದೆ. ಹಿಂದೂಗಳು ಹಾಗೂ ಹಿಂದೂಧರ್ಮ ಇವೆರಡಕ್ಕೂ ನಾವು ಅನ್ವಯಿಸಿದ ಪ್ರಮಾಣ ತೀರ ಕಠೋರವೆಂದೂ, ಆ ಪ್ರಮಾಣದಿಂದ ಅಳೆಯ ಹೊರಟರೆ ಈಗಿರುವ ಯಾವ ಧರ್ಮವೂ ಸಮರ್ಪಕವಾಗಲಾರದೆಂದೂ ಗಾಂಧೀಜಿ ಹೇಳುತ್ತಾರೆ. ಅಂಬೇಡ್ಕರ್ ಹೇಳಿದ ಪ್ರಮಾಣ ಉನ್ನತವೆಂಬುದು ನಿಜವಾಗಿರಬಹುದು. ಆದರೆ ಪ್ರಮಾಣ ದೊಡ್ಡದೊ ಚಿಕ್ಕದೊ ಎಂಬುದು ಪ್ರಶ್ನೆಯಲ್ಲ, ಆ ಪ್ರಮಾಣಗಳು ಯೋಗ್ಯವೆ ಅಲ್ಲವೆ ಎಂಬುದು ಮುಖ್ಯಪ್ರಶ್ನೆ. ಒಂದು ಜನತೆ ಮತ್ತು ಅವರ ಧರ್ಮ, ಇವೆರಡನ್ನೂ ಸಾಮಾಜಿಕ ನೀತಿಯನ್ನಾಧರಿಸಿದ ಸಾಮಾಜಿಕ ಮಟ್ಟದಿಂದಲೇ ಬೆಲೆಗಟ್ಟಬೇಕಾಗುತ್ತದೆ. ಜನರ ಕಲ್ಯಾಣ ಜೀವನಕ್ಕೆ ಧರ್ಮವೊಂದು ಅವಶ್ಯಕ ಘಟಕವಾಗಿದ್ದರೆ, ಇದನ್ನು ಬಿಟ್ಟು ಬೇರೆ ಯಾವ ಪ್ರಮಾಣವೂ ಅಗತ್ಯವಾಗದು. ಹಿಂದೂಗಳು ಹಾಗೂ ಹಿಂದೂ ಧರ್ಮ ಇವೆರಡರ ಯೋಗ್ಯತೆಯನ್ನು ಅಳೆಯಲು ಅಂಬೇಡ್ಕರ್ ಹಿಡಿದ ಮಾನದಂಡ ಅತ್ಯಂತ ಸಮರ್ಪಕವೆಂದೇ ತೋರುತ್ತದೆ. ಅಂಬೇಡ್ಕರ್ ಮಾನದಂಡದಿಂದ ಅಳೆದರೆ ಗೊತ್ತಿರುವ ಪ್ರತಿಯೊಂದು ಧರ್ಮ ಅದಕ್ಕೆ ನಿಲುಕದೆ ಸೋತು ಹೋಗುವುದೆಂಬುದು ನಿಜವಾಗಿರಬಹುದು, ಆದರೆ ಹಿಂದೂಗಳ ಹಾಗೂ ಹಿಂದೂ ಧರ್ಮದ ಮುಂದಾಳಾಗಿ ನಿಂತ ಗಾಂಧೀಜಿಗೆ ಇದು ನೆಮ್ಮದಿಯ ಕಾರಣವಾಗಕೂಡದು. ಹಿಂದೂಗಳ ಹಾಗೂ ಹಿಂದೂ ಧರ್ಮ ಇವೆರಡೂ ಸಮರ್ಪಕವಾದ ಮಟ್ಟದಲ್ಲಿ ಇಲ್ಲವೆಂಬ ಒಂದೇ ಒಂದು ಕಾರಣದಿಂದ ಹುಟ್ಟಲಿಲ್ಲ. ಅಂಬೇಡ್ಕರ್ ಇರಬೇಕಾಗಿ ಬಂದ ಸಮಾಜದಲ್ಲಿ ಅದರ ದೋಷಗಳನ್ನೂ ನ್ಯೂನತೆಗಳನ್ನೂ ಸಹಿಸಲು ಸಿದ್ಧರಾಗಿದ್ದರು; ಹಿಂದೂಗಳು ಹಾಗೂ ಹಿಂದೂ ಧರ್ಮದ ಜೊತೆಗಿರುವ ಅಂಬೇಡ್ಕರ್ ಜಗಳಕ್ಕೆ ಅವುಗಳ

ಸಾಮಾಜಿಕ ನಡವಳಿಕೆಯ ನ್ಯೂನತೆ ಕಾರಣವಲ್ಲ, ಇನ್ನೂ ಆಳವಾದ ಕೆಲವು ಮೂಲಭೂತ ಕಾರಣವಿದೆ. ಅದು ಅವರ ಆದರ್ಶಗಳ ವಿಚಾರಕ್ಕೆ ಸೇರಿದ್ದು. ಹಿಂದೂ ಸಮಾಜಕ್ಕೆ ನೈತಿಕ ಪುನರ್ಜನ್ಮ ಈಗ ಅತ್ಯಂತ ಅವಶ್ಯಕವೆಂದು ಅಂಬೇಡ್ಕರ್‌ಗೆ ತೋರುತ್ತದೆ. ಇದನ್ನು ಈಗಾಗಲೇ ಸಾಧಿಸದೆ ಮುಂದೂಡುವುದು ಅಪಾಯಕಾರಿಯಾದೀತು. ಈ ಪುನರ್ಜನ್ಮ ಅಥವಾ ಪುನರುದ್ಧಾರವನ್ನು ನಿರ್ಧರಿಸುವವರು ಹಾಗೂ ನಿಯಂತ್ರಿಸುವವರು ಯಾರು ಎಂಬುದು ಪ್ರಶ್ನೆ. ಬೌದ್ಧಿಕ ಪುನರ್ಜನ್ಮವನ್ನು ಪಡೆದು, ಬೌದ್ಧಿಕ ಧೈರ್ಯ ತೋರುವ ಪ್ರಾಮಾಣಿಕತೆ ಯಾರಿಗೆ ಉಂಟೋ ಅಂಥವರೆ ಈ ಕಾರ್ಯ ಮಾಡಬಲ್ಲರು. ಈ ಮಾನದಂಡದಿಂದ ಅಳೆದು ನೋಡಿದಾಗ, ಈಗ ಹಿಂದೂ ಮುಂದಾಳುಗಳೆನಿಸಿಕೊಂಡವರು ಈ ಮಹಾಕಾರ್ಯಕ್ಕೆ ಅನರ್ಹರೆಂದು ಅಂಬೇಡ್ಕರ್ ಅಭಿಪ್ರಾಯ. ಪೂರ್ವಭಾವಿಯಾಗಿ ಹೊಂದಿರಬೇಕಾದ ಬೌದ್ಧಿಕ ಪುನರ್ಜನ್ಮವನ್ನು ಅವರು ಹೊಂದಿಲ್ಲ. ಹಾಗೆ ಹೊಂದಿದ್ದವರಾಗಿದ್ದ ಪಕ್ಷದಲ್ಲಿ ಅಶಿಕ್ಷಿತ ಜನಸಮೂಹದಂತೆ ತಾವೇ ಮೋಸ ಮಾಡಿಕೊಳ್ಳುತ್ತಿರಲಿಲ್ಲ. ಮತ್ತು ಈಗ ಅವರು ಮಾಡುತ್ತಿರುವಂತೆ ಜನತೆಯ ಅಜ್ಞಾನವನ್ನು ದುರುಪಯೋಗಪಡಿಸಿಕೊಳ್ಳುತ್ತಲೂ ಇರಲಿಲ್ಲ ಪವಿತ್ರವೆಂಬ ಕೆಲವು ಕಲ್ಪನೆಗಳನ್ನು ಗೌರವಿಸುತ್ತ ಬಂದ ಸಂಪ್ರದಾಯವಾದಿಯಂತೆ ಗಾಂಧೀಜಿ ವಿಚಾರ ಮಾಡಲು ತೊಡಗಿದರೆ ತಾವು ಈವರೆಗೆ ಪಾಲಿಸಿಕೊಂಡು ಬಂದಿರುವ ಅನೇಕ ಆದರ್ಶಗಳು ಸಮಾಧಿಯಾಗುವುದಲ್ಲವೆ? ಸಾಧುಸಂತರನ್ನು ನಂಬಿಕೊಂಡು ಕುಳಿತರೆ ಸತ್ಯದ ಬಳಿಗೆ ಸಾಗಲಾರವು. ಸಾಧುಸಂತರು ಕೂಡ ಮನುಷ್ಯ ಮಾತ್ರರು;ಅಂಬೇಡ್ಕರ್ ಜಾತಿ, ವರ್ಣ, ಹಿಂದುತ್ವ ಕುರಿತು ವೈಚಾರಿಕವಾಗಿ ಚಿಂತಿಸಿದರೆ, ಗಾಂಧೀಜಿ ಸಾಂಪ್ರದಾಯಿಕ ನೆಲೆಯಲ್ಲಿ ಅಭಿವ್ಯಕ್ತಿಸುತ್ತಾರೆ.

ಲಾರ್ಡ್ ಬಲ್‌ಫೋರ್ ಹೇಳುವ ಹಾಗೆ ಸತ್ಯ ಶೋಧನೆಗೆ ಹಂದಿಯ ಮೂತಿ ಎಷ್ಟು ಒಳ್ಳೆಯ ಸಾಧನವೊ, ಅದಕ್ಕಿಂತ ಉತ್ತಮ ಸಾಧನ ಮನುಷ್ಯನ ಮನಸ್ಸು ಅಲ್ಲ. ಬಹುಶಃ ಪ್ರತಿಯೊಬ್ಬ ಬ್ರಾಹ್ಮಣನು ಜಾತಿಯ ನಿಯಮವನ್ನು ಭಂಗಿಸಿದ್ದಾನೆ. ಪೌರೋಹಿತ್ಯ ನಡೆಸುವ ಬ್ರಾಹ್ಮಣರ ಸಂಖ್ಯೆಗಿಂತಲೂ ಪಾದರಕ್ಷೆ ಮಾರುವ ಬ್ರಾಹ್ಮಣರ ಸಂಖ್ಯೆ ತೀರ ದೊಡ್ಡದಾಗಿದೆ. ತಮ್ಮ ಕುಲವೃತ್ತಿಯಾದ ಪೂಜೆ ಪೌರೋಹಿತ್ಯಗಳನ್ನು ಬಿಟ್ಟಿದ್ದಾರೆಂಬುದಷ್ಟೆ ಅಲ್ಲದೆ ಬ್ರಾಹ್ಮಣರು ಶಾಸ್ತ್ರಗಳಲ್ಲಿ ನಿಷಿದ್ಧವೆಂದು ಹೇಳಿದ ವೃತ್ತಿಗಳನ್ನು ಕೂಡ ಕೈಗೊಂಡು ನಡೆಸುತ್ತ ಇದ್ದಾರೆ. ಹೀಗೆ ಪ್ರತಿದಿನ ಜಾತಿನಿಯಮವನ್ನು ಮುರಿಯುತ್ತಿರುವ ಬ್ರಾಹ್ಮಣರಲ್ಲಿ ಎಷ್ಟು ಜನ ಜಾತಿಯನ್ನು ಹಾಗೂ ಶಾಸ್ತ್ರಗಳನ್ನು ತೊರೆಯಲು ಬೋಧಿಸುತ್ತಾರೆ? ಶಾಸ್ತ್ರಗಳನ್ನು ವಿರೋಧಿಸಿ ಬೋಧನೆ ಮಾಡುವ ಒಬ್ಬ ಪ್ರಾಮಾಣಿಕ ಬ್ರಾಹ್ಮಣನಿದ್ದರೆ, ಪ್ರತಿದಿನ ಜಾತಿಯನ್ನು ಮೀರಿ, ಶಾಸ್ತ್ರಗಳನ್ನು ಪ್ರಶ್ನಿಸುತ್ತಲೇ ಅವೆರಡನ್ನೂ ಆವೇಶದಿಂದ ಸಮರ್ಥಿಸಿ ಎತ್ತಿಹಿಡಿಯುವ ಬ್ರಾಹ್ಮಣರು ನೂರಾರು ಜನರಿದ್ದಾರೆ. ಈ ದ್ವಿಮುಖ ಕಪಟ ನೀತಿಯೇತಕ್ಕೆ? ಜನಸಾಮಾನ್ಯರು ಜಾತಿಯ

ಹಿಡಿತದಿಂದ ಮುಕ್ತರಾದ ಪಕ್ಷದಲ್ಲಿ ಬ್ರಾಹ್ಮಣ ವರ್ಗದ ಅಧಿಕಾರ, ಗೌರವಗಳಿಗೆ ಅವರು ಆಸ್ಪದ ಕೊಡಲಾರರೆಂಬ ಭಯ ಬ್ರಾಹ್ಮಣರಿಗಿದೆ. ಬುದ್ಧಿವಂತ ವರ್ಗವಾದ ಬ್ರಾಹ್ಮಣರ ಈ ಅಪ್ರಾಮಾಣಿಕತೆ ಅತ್ಯಂತ ಲಜ್ಜಾಸ್ಪದವಾಗಿದೆ. ಮ್ಯಾಥೋ ಆರ್ನಾಲ್ಡ್ ಹೇಳುವಂತೆ, "ಹಿಂದೂಗಳು ಸತ್ತುಹೋದ ಒಂದು ಜಗತ್ತು, ಜನ್ಮ ತಳೆಯಲು ಶಕ್ತಿಯಿಲ್ಲದ ಇನ್ನೊಂದು ಜಗತ್ತು ಇವೆರಡರ ನಡುವೆ ಎಡತಾಕುತ್ತಿದ್ದಾರೆ." ವರ್ತಮಾನದಲ್ಲಿ ಜಾತಿ, ವರ್ಣ, ಹಿಂದುತ್ವ ಕುರಿತ ಅಂಧಾನುಕರಣೆ ಕೇವಲ ಬ್ರಾಹ್ಮಣರಲ್ಲಿ ಮಾತ್ರ ಇರದೇ, ಎಲ್ಲಾ ಸಮುದಾಯಗಳಲ್ಲೂ ಬೆಳೆದಿದೆ.

ಪರಾಮರ್ಶನ ಗ್ರಂಥಗಳು:

1. ಬಂಜಗೆರೆ ಜಯಪ್ರಕಾಶ್ (ಅನು), (2023), ಬೇಗಂಪುರ, ಜೀರುಂಡೆ ಪ್ರಕಾಶನ, ಬೆಂಗಳೂರು.
2. ವಿಕಾಸ್ ಆರ್. ಮೌರ್ಯ, (2023), ಅಂಬೇಡ್ಕರ್ ಜಗತ್ತು, ಜೀರುಂಡೆ ಪ್ರಕಾಶನ, ಬೆಂಗಳೂರು.
3. ಮೂಡ್ನಕೂಡು ಚಿನ್ನಸ್ವಾಮಿ, (2018), ಬಹುತ್ವದ ಭಾರತ ಮತ್ತು ಬೌದ್ಧ ತಾತ್ವಿಕತೆ ಪ್ರಬಂಧಗಳು, ಲಡಾಯಿ ಪ್ರಕಾಶನ, ಗದಗ.
4. ಮೊಗಳ್ಳಿ ಗಣೇಶ್, (2018), ಅಂಬೇಡ್ಕರ್ ಎಂಬ ಮಹಾ ನದಿ ಮತ್ತು ದಲಿತೀಕರಣಗೊಂಡ ಗಾಂಧೀಜಿ, ಲಡಾಯಿ ಪ್ರಕಾಶನ, ಗದಗ.
5. ಸುಮಾ ಬಿ.ಯು. (ಸಂ), (2015), ಡಾ. ಬಿ.ಆರ್. ಅಂಬೇಡ್ಕರ್ ವರ್ತಮಾನದೊಂದಿಗೆ ಮುಖಾಮುಖಿ, ಲಡಾಯಿ ಪ್ರಕಾಶನ, ಗದಗ.
6. ಜಾಜಿ ದೇವೇಂದ್ರಪ್ಪ (ಅನು), (2018), ಹಿಂದೂ ಧರ್ಮೋತ್ತರ ಭಾರತ, ಲಡಾಯಿ ಪ್ರಕಾಶನ, ಗದಗ.
7. ಸದಾಶಿವ ಮರ್ಜಿ, (2017), ನಾನು ಹಿಂದೂವಾಗಿ ಸಾಯಲಾರೆ ಡಾ ಅಂಬೇಡ್ಕರ್, ಲಡಾಯಿ ಪ್ರಕಾಶನ, ಗದಗ.
8. ಅಂಬೇಡ್ಕರ್ ಬಿ.ಆರ್. (ಮೂಲ), ಸುರೇಶ್ ಭಟ್‌ಬಾಕ್ರಾಬೈಲ್ (ಅನು), (2017), ಹಿಂದೂ ಧರ್ಮದ ತತ್ವ, ಲಡಾಯಿ ಪ್ರಕಾಶನ, ಗದಗ.
9. ಶಂಕರ್ (ಅನು), (2007), ಬ್ರಾಹ್ಮಣ ಧರ್ಮದ ದಿಗ್ವಿಜಯ ರಾಜಹತ್ಯೆ ಅಥವಾ ಪ್ರತಿ ಕ್ರಾಂತಿಯ ಉಗಮ, ಆದಿಮಪ್ರಕಾಶನ, ಕೋಲಾರ.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4. 0 International License.